ಇಲಾಖೆಯವರು ಪ್ರಯತ್ನ ಮಾಡಿದರೂ ಅವರಿಗೆ ಯಾವುದೇ ಸುಳಿವೂ ಸಿಗುತ್ತಿಲ್ಲ. ಅಂತರರಾಜ್ಯ ಕಳ್ಳರ ಕಾಗೂ ಮೋಸಗಾರರ ತಂಡವಿರಬಹುದೆಂಬ ಶಂಕೆ ಇದ್ದು ಇದನ್ನು ಸಿ.ಓ.ಡಿ. ತನಿಖೆಗಾಗಿ ಕಳಿಸಿಕೊಡುವಂತೆ ಒತ್ತಾಯಿಸುತ್ತೇನೆ ಹಾಗೂ ಈ ಬಗ್ಗೆ ಸದನದಲ್ಲಿ ಹೇಳಿಕೆ ನೀಡುವಂತೆ ಗೃಹ ಮಂತ್ರಿಗಳಾಗಿರುವ ಮುಖ್ಯ ಮಂತ್ರಿಯವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ)–ಮಾನ್ಯ ಅಧ್ಯಕ್ಷರೆ, ಗೋಕಾಕ್‌ನ ಶ್ರೀ ಎ. ಎಸ್. ಬಿದರಿಯವರು ಕೊಟ್ಟ ದೂರನ್ನು ೩೬/೮೮ ರಲ್ಲಿ ನೋಂದಾಯಿಸಿಕೊಳ್ಳಲಾಗಿದ್ದು ನ್ಯಾಯಾಲಯದ ಆದೇಶದಂತೆ ಮೋಸದ ಮೊಕದ್ದಮೆಯನ್ನು ಕೆಳಕಂಡವರ ಮೇಲೆ ಗೋಕಾಕ್ ಪೋಲೀಸ್ ಠಾಣೆಯಲ್ಲಿ ನೋಂದಾಯಿಸಿಕೊಳ್ಳಲಾಗಿದೆ.

೧. ಎ ಕೆ. ಕಿತ್ತೂರ ಟ್ರಾನ್ಸ್‌ಪೋರ್ಟ್ ಏಜೆಂಟ್, ಸ್ವಾಪ್ತಿಕ್ ಟ್ರಾನ್ಸ್‌ಪೋರ್ಟ್, ಗೋಕಾಕ್

೨. ಆರ್. ಸುಂದರನ್, ಡ್ರೈವರ್ ಟ್ರಕ್ ನಂ. ಸಿಎಕೆ ೯೦೯೦

೩. ಕೆ, ಸೆಲ್ವರಾಜ್, ಟ್ರಕ್ ಮಾಲೀಕ (ಸಿಎಕೆ ೯೦೯೦)

ಈಗ ತನಿಖೆ ಮಾಡಲಾಗುತ್ತಿದೆ.

೨. ನಾರಾಯಣ ಕೃಷ್ಣ. ಸ್ಪಿನ್ನರ್ಸ್ ಪ್ರೈವೇಟ್ ಲಿಮಿಟೆಡ್, ಉದಮಲಪೇಟೆ. ತಮಿಳ್ನಾಡುರವರಿಗೆ ೫೦ ಹತ್ತಿ ಬೇಲ್‌ಗಳನ್ನು ತಲುಪಿಸುವ ಸಲುವಾಗಿ ಟ್ರಾನ್ಸ್‌ಪೋರ್ಟ್ ಏಜೆಂಟರಾ ಸಿಎಕೆ ೯೦೯೦ ಟ್ರಕ್‌ನ ದಾಖಲಾತಿಗಳನ್ನು ಪರಿಶೀಲಿಸದೆ ಹತ್ತಿ ಬೇಲ್‌ಗಳನ್ನು ಸದರಿ ಲಾರಿಗೆ ಹಾಕಿ ಕಳುಹಿಸಿಕೊಟ್ಟಿದ್ದು ಈವರೆವಿಗೂ ಹತ್ತಿ ಬೇಲ್‌ಗಳು ಸೇರಬೇಕಾದ ಸ್ಥಳಕ್ಕೆ ಸೇರಿಲ್ಲವೆಂದು ಫಿರ್ಯಾದಿಯು ದೂರಾಗಿರುತ್ತದೆ.

೩. ತಪಾಸಣೆಯನ್ನು ಕೈಗೊಂಡ ಸಿಎಸ್‌ಐ ರವರು ಸದರಿ ಟ್ರಕ್‌ಗಾಗಿ ಎಲ್ಲಾ ಚೆಕ್ ಪೋಸ್ಟ್‌ನ ದಾಖಲಾತಿಗಳಲ್ಲಿ ಪರಿಶೀಲಿಸಿದರೂ ಸಿಎಕೆ ೯೦೯೦ರ ನಂಬರ್‌ನ ಟ್ರಕ್ ಬಂದ ಬಗ್ಗೆ ದಾಖಲಾತಿ ಕಂಡು ಬಂದಿರುವುದಿಲ್ಲ. ತನಿಖೆಯಿಂದ ಹತ್ತಿ ಬೇಲ್‌ಗಳನ್ನು ಒಯ್ದಂ ಟ್ರಕ್ಕಿನ ಡ್ರೈವರ್ ಫೋಟೊ ನಂಬರ್ ಪ್ಲೇಟುಗಳನ್ನು ಹಾಕಿಕೊಂಡು ಸಾಗಿಸಿರುವುದು ಕಂಡುಬರುತ್ತದೆ.

೪. ಶ್ರೀ ಎ ಕೆ. ಕಿತ್ತೂರ್. ಟ್ರಾನ್ಸ್‌ಪೋರ್ಟ್ ಏಜೆಂಟ್ ಗೋಕಾಕ್ ಇವರನ್ನು ಪೋಲೀಸರು ದಿನಾಂಕ ೧೧-೫-೧೯೮೮ ರಂದು ಬಂಧಿಸಿ ಕೋರ್ಟಿಗೆ ಹಾಜರುಪಡಿಸಿರುತ್ತಾರೆ.

೫. ಕಳವಾದ ಹತ್ತಿ ಬೇಲ್‌ಗಳ ಮೌಲ್ಯ ೩ ಲಕ್ಷ ೩೫ ಸಾವಿರ ರೂಪಾಯಿಗಳಾಗಿರುತ್ತದೆ. ಈ ಪ್ರಕರಣದ ಮಾಲು ಮತ್ತು ಆರೋಪಿಗಳನ್ನು ಪತ್ತೆ ಹಚ್ಚಲು ಪ್ರಯತ್ನಗಳು ಮುಂದುವರಿಯುತ್ತಿವೆ.

10) ಗ್ರಾಮಾಭಿವೃದ್ಧಿ ಕಾರ್ಯದರ್ಶಿಗಳು ಕೋಲಾರ ಜಿಲ್ಲೆಯಲ್ಲಿ ಶಾಸಕರ ಗಮನಕ್ಕೆ ತಾರದೆ ವಿವಿಧ ಕಾರ್ಯಕ್ರಮಗಳನ್ನು ನಡೆಸಿ ಶಂಕು ಸ್ಥಾಪನೆಗಳನ್ನು ಮಾಡಿರುವುದು

ಶ್ರೀ ಬಿ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ ಕರ್ನಾಟಕ ಸರಕಾರದ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳಾದ ಎಸ್. ಎಸ್. ವೀಣಾಕ್ಷಿ ಸುಂದರಂ, ಐ.ಎ.ಎಸ್.ರವರು ಇತ್ತೀಚೆಗೆ ನನ್ನ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಿಸಿದಂತೆ ಹಲವಾರು ಸರಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಉದ್ಘಾಟನೆ, ಶಂಕು ಸ್ಥಾಪನೆ ಮಾಡಿರುವುದು ಸರಿಯಷ್ಟೆ. ಉದಾಹರಣೆ: ನನ್ನ ಕ್ಷೇತ್ರದ ವ್ಯಾಪ್ತಿಗೆ ಸೇರಿರುವ ದೇವರಗುಡಿಯಲ್ಲಿ ಕಿರು ನೀರಾವರಿ ಸರಬರಾಜು ಯೋಜನೆಯ ಉದ್ಘಾಟನೆಯನ್ನು ದಿನಾಂಕ ೨೫-೫-೧೯೮೮ ರಂದು ನೆರವೇರಿಸಿದ್ದು ಈ ಹಿಂದೆಯೂ ಸಹ ನನ್ನ ಕ್ಷೇತ್ರದ ಗಂಡಿಬೆಂಡೆ ತಾಲೂಕಿಗೆ ಸೇರಿದ ಹಂಪಸಂದ್ರ ಮತ್ತು ಬಾಗೇಪಲ್ಲಿ ತಾಲೂಕಿಗೆ ಸೇರಿದ ಸೋಮೇಸಹಳ್ಳಿ ಮುಂತಾದ ವಿವಿಧ ಕಾರ್ಯಕ್ರಮಗಳ ಉದ್ಘಾಟನೆ, ಶಂಕುಸ್ಥಾಪನೆಗಳನ್ನು ನೆರವೇರಿಸಿರುತ್ತಾರೆ. ಈ ಅಧಿಕಾರಿ ಕ್ಷೇತ್ರದ ಶಾಸಕರಾದ ನನ್ನ ಗಮನಕ್ಕೆ ತರದೆ, ಆಹ್ವಾನ ಪತ್ರಿಕೆಯಲ್ಲೂ ನನ್ನ ಹೆಸರನ್ನು ಮುದ್ರಿಸದೆ ತಾವೇ ಶಾಸಕರೊಪಾದಿಯಲ್ಲಿ ವರ್ತಿಸಿ ಶಾಸಕಾಂಗಕ್ಕೆ ಅಪಚಾರ ವೆಸಗಿರುವುದಲ್ಲದೆ ವೈಯಕ್ತಿಕವಾಗಿಯೂ ನನ್ನ ಘನತೆಗೆ ಕುಂದು ತಂದಿದ್ದಾರೆ. ಸಿಕ್ಕಾಪಟ್ಟೆ ತವಗೆ

ಇಚ್ಚೆಬಂದ ಹಾಗೆ ನನ್ನ ಕ್ಷೇತ್ರದಲ್ಲಿ ಶಾಸಕರಾದ ನನ್ನ ಗಮನಕ್ಕೆ ತರದೆ ಸರಕಾರಿ ಕಾರ್ಯಕ್ರಮಗಳನ್ನು ಉದ್ಘಾಟನೆ ಮಾಡಿ ಕರ್ತವ್ಯ ಲೋಪವೆಸಗಿದ್ದು, ಈಗಾಗಲೇ ಸ್ಥಳೀಯ ಸುದ್ದಿ ಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಗಿದೆ.

ಆದ್ದರಿಂದ ಸರಕಾರ ಸಂಬಂಧಿಸಿದ ಮಂತ್ರಿಗಳು ಈ ಕಾರ್ಯದರ್ಶಿ ಉದ್ಘಾಟನೆ ಮಾಡಿರುವ ಹಾಗೂ ಶಂಕುಸ್ಥಾಪನೆಗೊಂಡಿರುವ ಎಲ್ಲಿ ಕಲ್ಲುಗಳನ್ನು ಕಿತ್ತಿಸೆದು ಕಾರ್ಯದರ್ಶಿಗೆ ಛೀಮಾರಿ ಹಾಕ ಬೇಕಾಗಿದೆ. ಅಲ್ಲದೆ, ಇನ್ನು ಮುಂದೆ ನನ್ನಂತೆ ರಾಜ್ಯದ ಬೇರೆ ಯಾವುದೇ ಶಾಸಕರಿಗೆ ಉನ್ನತಾಧಿಕಾರಿ ಗಳಿಂದ ಈ ರೀತಿ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿಯುತ ಆದೇಶ ನೀಡಬೇಕಾಗಿ ಈ ಮೂಲಕ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಕಾರ್ಯದರ್ಶಿಯವರು ಕೋಲಾರ ಜಿಲ್ಲೆಯಲ್ಲಿ ಎರಡು ಸಮಾರಂಭಗಳಲ್ಲಿ ಭಾಗವಹಿಸಿದ್ದು ನಿಜ ವಿರುತ್ತದೆ ಈ ಎರಡೂ ಸಮಾರಂಭಗಳನ್ನು ಸಂಬಂಧಪಟ್ಟ ಮಂಡಲ ಪಂಚಾಯಿತಿಯ ಪ್ರಧಾನರ ಕೋರಿಕೆಯ ಮೇರೆಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆಯ ಕಾರ್ಯದರ್ಶಿಯವರು ಭಾಗವಹಿಸಿದ್ದರು. ಈ ಸಮಾರಂಭಗಳನ್ನು ಮಂಡಲ ಪಂಚಾಯಿತಿಗಳೇ ಯೋಜಿಸಿದ್ದವು. ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿಗಳು ಈ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರುವುದರಿಂದ ಈ ಸಮಾರಂಭಗಳನ್ನು ಸರ್ಕಾರದ ವತಿಯಿಂದ ಏರ್ಪಡಿಸಿರುವುದಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಜಾರಿಗೆ ತರುವ ಯೋಜನೆಗಳ ವಿಷಯದಲ್ಲಿ ಏರ್ಪಡಿಸುವ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಬಗ್ಗೆ ಸರ್ಕಾರವು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಸೂಚನೆ ನೀಡುವುದು ಅಷ್ಟು ಸೂಕ್ತವಾಗಿರುವುದಿಲ್ಲವೆಂದು ಹೇಳುತ್ತೇನೆ.

11) ರಾಜ್ಯದ ಬಂದರುಗಳಲ್ಲಿ ಹೊಳೆತ್ತುವ ಕಾರ್ಯವನ್ನು ತ್ವರಿತವಾಗಿ ಮಾಡುವುದು.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ ಕರ್ನಾಟಕದ ಬಂದರುಗಳಲ್ಲಿ ಹೊಳೆತ್ತುವ ಕುರಿತು ಅನೇಕ ವರ್ಷಗಳಿಂದ ಸರಕಾರವನ್ನು ಒತ್ತಾಯಿಸಲಾಗಿದೆ. ಈ ಕುರಿತು ಮಂಗಳೂರಿನಲ್ಲಿ ಪ್ರಾರಂಭಿಸಿದ ಕೆಲಸ ತೀರ ವ್ಯರ್ಥವೆನ್ನಲಾಗುತ್ತಿದೆ. ಹಣ ಮತ್ತು ಕಾಲ ವ್ಯಯವಾಗುವ ಜನರ ಕಣ್ಣು ಒರೆಸುವ ಕೆಲಸ ಬಿಟ್ಟು ಜನೋಪಯೋಗಿ ಕೆಲಸ ಆಗಬೇಕೂ ಕುಂದಾಪುರ ಬಂದರದ ಗಂಗೊಳ್ಳಿ ಅಳವೆಯಲ್ಲಿ ಸಹಾ ಮಣ್ಣು ತುಂಬಿದೆ. ಹೊಳೆತ್ತದೆ ವಿಮಾನುಗಾರಿಕಾ ಯಾಂತ್ರಿಕ ದೋಣಿಗಳಿಗೆ, ಸಾರಿಗೆ ಮುಷ್ಕೆಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಅಪಾರ ನಷ್ಟ ಸಂಭವಿಸುತ್ತಲಿದೆ. ಈ ಕುರಿತು ಸಹಾ ಸರಕಾರ ಶೀಘ್ರ ಗಮನಹರಿಸಿ, ವಿಮಾನುಗಾರರ ಹಾಗೂ ವರ್ತಕರ ಸೊತ್ತು ಹಾಗೂ ಜೀವಗಳಿಗೆ ಹಾನಿ ಆಗದಂತೆ ರಕ್ಷಣೆ ನೀಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಬಂದರು ಮತ್ತು ವಿಮಾನುಗಾರಿಕೆ ಸಚಿವರು).—ಮಾನ್ಯ ಅಧ್ಯಕ್ಷರೇ ಮಂಗಳೂರು ಹಳೆ ಬಂದರಿನ ಅಳವೆಯಲ್ಲಿ ಹೂಳೆತ್ತುವ ಕೆಲಸವನ್ನು ಮೆಸರ್ಸ್ ಬೋಸ್ ಡ್ರೆಡ್ಜಿಂಗ್ ಸರ್ವಿಸಸ್ ಅವರಿಗೆ ಸುಮಾರು ೧೨ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮತ್ತು ವಿಮಾನುಗಾರಿಕೆ ವಾರ್ಫನಲ್ಲಿ ಅದೇ ಕಂಪನಿಗೆ ಸುಮಾರು ೬ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಾಮಗಾರಿಯನ್ನು ವಹಿಸಲಾಗಿದೆ. ಅವರು ಯಂತ್ರಗಳನ್ನೆಲ್ಲಾ ಜೋಡಿಸಿದ್ದು ಹೊಳೆತ್ತುವ ಕೆಲಸವನ್ನು ಈಗತಾವೆ ಪ್ರಾರಂಭಿಸಿದ್ದಾರೆ. ಇವರ ಕೆಲಸ ಅಷ್ಟು ಸಮರ್ಪಕವಾಗಿಲ್ಲವೆಂದು ವರದಿ ಬಂದಿದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಬಂದರು ನಿರ್ದೇಶಕರಿಗೆ ತಿಳಿಸಲಾಗಿದೆ.

ಎಲ್ಲ ಸಣ್ಣ ಬಂದರುಗಳಲ್ಲೂ ಹೂಳೆತ್ತುವ ಕೆಲಸವನ್ನು ಮಳೆಗಾಲದ ನಂತರ, ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯ ಸಂಸ್ಥೆಗೆ ಒಪ್ಪಿಸುವ ಬಗ್ಗೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಕುಂದಾಪುರ ಬಂದರಿನಲ್ಲಿ ಹೊಳೆತ್ತುವ ಕೆಲಸಕ್ಕಾಗಿ ೧೯೮೮-೮೯ನೇ ಆಯವ್ಯಯದಲ್ಲಿ ೧೦೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.